ಹಣ್ಣು ಮತ್ತು ತರಕಾರಿ ಆಮದು

71(592); ಶ್ರೀ ಸಿದ್ದು ಬಿ. ನ್ಯಾಮಗೌಡ (ಜಮಖಂಡಿ)

ಅ) ಈ ವರ್ಷ ನಮ್ಮ ರಾಜ್ಯದಲ್ಲಿ ಮತ್ತು ಭಾರತದಲ್ಲಿ ಬಳೆದ ಮಾವಿನ ಹಣ್ಣನ್ನು ಆಮದು ಮಾಡಿಕೊಳ್ಳಲು ಕೆಲವೊಂದು ರಾಷ್ಟ್ರಗಳವರು ನಿರಾಕರಿಸಿರುವುದು ನಿಜವೆ; ನಿಜವಾದಲ್ಲಿ ಅದಕ್ಕೆ ಕಾರಣಗಳೇನು; ಮತ್ತು ಸರ್ಕಾರ ಈ ವಿಚಾರದಲ್ಲಿ ಕೈಗೊಂಡ ಕ್ರಮಗಳೇನು;

ಆ) ಇದರಿಂದಾಗಿ ಮಾರುಕಟ್ಟೆಯಲ್ಲಿ ಮಾವಿನ ಹಣ್ಣಿನ ಬೆಲೆ ಕುಸಿದಿದ್ದು ರೈತರಿಗೆ ಅಪಾರ ಹಾನಿ ಉಂಟಾಗಿದೆ. ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ನಮ್ಮ ರಾಜ್ಯದಿಂದ ಯಾವ ಯಾವ ಹಣ್ಣುಗಳನ್ನು ವಿದೇಶಿಕ್ಕೆ ರಫ್ತು ಮಾಡಲಾಗಿದೆ; ಮತ್ತು ಅದರ ಪ್ರಮಾಣ ಎಷ್ಟು;

ಈ) ರಾಜ್ಯದಲ್ಲಿ ಅದರಲ್ಲೂ ಉತ್ತರ ಕರ್ನಾಟಕ ಭಾಗದಲ್ಲಿ ಅಕಾಲಿಕ ಆಲಿಕಲ್ಲು ಮಳೆಯಿಂದ ಹಣ್ಣು ಮತ್ತು ತರಕಾರಿ ಬೆಳೆಯುವ ರೈತರು ಹಾನಿಗೊಳಗಾಗಿ ನಷ್ಟವನ್ನು ಅನುಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ರೈತರಿಗೆ ನೀಡಿದ ನಷ್ಟ ಪರಿಹಾರವೇನು; ಮತ್ತು ಬಾಕಿ ಪರಿಹಾರದ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವುದು?

ಡಾ॥ ಶಾಮನೂರು ಶಿವಶಂಕರಪ್ಪ (ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು)

ಅ) ಹೌದು.

ಐರೋಪ್ಯ ಒಕ್ಕೂಟ ರಾಷ್ಟ್ರಗಳು 2014 ನೇ ಮಾವು ಹಂಗಾಮಿನಲ್ಲಿ ನಮ್ಮ ದೇಶದ ಮಾವಿನ ಹಣ್ಣುಗಳನ್ನು ಆಮದು ಮಾಡಿಕೊಳ್ಳಲು ಈ ಕೆಳಕಂಡಂತೆ ಕೆಲವೊಂದು ಕಾರಣಗಳನ್ನು ನೀಡಿ, ನಿರಾಕರಿಸಿರುತ್ತವೆ.

ಇವುಗಳೆಂದರೆ; ಆಮದು ಮಾಡಿಕೊಂಡ ಹಣ್ಣುಗಳಲ್ಲಿ ಕಂಡುಬರುವ ಹಣ್ಣಿನ ಹುಳುಗಳು (Maggots of fruit fly) ಆ ದೇಶಗಳಲ್ಲಿ Quarantine pest ಎಂದು ಘೋಷಿರುವ ಕಾರಣ ಹಾಗೂ ಅಲ್ಲಿಯ ತರಕಾರಿ ಬೆಳೆಗಳಿಗೆ ಮಾರಕವಾಗಿರುವುದರಿಂದ, ಕೀಟ ನಿಯಂತ್ರಣಕ್ಕೆ ಇಂತಹ ನಿಷೇಧವನ್ನು ತಾತ್ಕಾಲಿಕವಾಗಿ 31 ಡಿಸೆಂಬರ್ 2015 ರವರೆಗೆ ಹೇರಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರವು ಐರೋಪ್ಯ ಒಕ್ಕೂಟ ರಾಷ್ಟ್ರಗಳೊಂದಿಗೆ ಚರ್ಚಿಸಿದ್ದರ ಫಲವಾಗಿ,

- ಯುರೋಪಿಯನ್ ರಾಷ್ಟ್ರೀಯ ಒಕ್ಕೂಟವು, EU-FVO ಆಡಿಟ್ ತಂಡವು ದಿನಾಂಕ 2–9–2014 ರಿಂದ 12–9–2014 ರವರೆಗೆ ಹಣ್ಣು ಮತ್ತು ತರಕಾರಿಗಳ ರಫ್ತು ಪ್ರಮಾಣೀಕರಣ ವ್ಯವಸ್ಥೆಯನ್ನು ಪರಿಶೀಲಿಸಲು ಭಾರತಕ್ಕೆ ಆಗಮಿಸುವುದಾಗಿ ತಿಳಿಸಿರುತ್ತಾರೆ.

- ಈ ದಿಶೆಯಲ್ಲಿ ಭಾರತ ಸರ್ಕಾರವು Export Inspection and Certification ವಿಧಾನವನ್ನು ಪ್ಯಾಕ್ ಹೌಸ್ ಮಟ್ಟದಲ್ಲಿ ತರುವ ಬಗೆ ಕ್ರಮ ಕೈಗೊಂಡಿದ್ದು, ದಿನಾಂಕ: 01–04–2014 ರಿಂದ ರಫ್ತು ಮಾಡಲಾಗುವ ಎಲ್ಲಾ ಉತ್ಪನ್ನಗಳನ್ನು ತಪಾಸಣೆ ಮಾಡಿ ಕಳಿಸುವ ವ್ಯವಸ್ಥೆ ಮಾಡಲಾಗಿದೆ.

- ಇಲಾಖೆಯು Karnataka Agri Business Development Corporation ಸಹಯೋಗದೊಂದಿಗೆ ಮಾವು ಅಭಿವೃದ್ಧಿ ಕೇಂದ್ರ, ಹೊಗಳಗೆರೆ, ಶ್ರೀನಿವಾಸಪುರ ತಾ., ಕೋಲಾರ ಇಲ್ಲಿ ಗುಣಮಟ್ಟದ ಹಣ್ಣಿನ ಉತ್ಪಾದನೆ ಹಾಗೂ ರಫ್ತಿಗೆ ಸಂಬಂಧಿಸಿದಂತೆ ಸುಮಾರು 620 ರೈತರಿಗೆ ತರಬೇತಿಯನ್ನು ನೀಡಲಾಗಿದೆ.

ಹಣ್ಣಿನ ಗುಣಮಟ್ಟ ಮತ್ತು phytosanitary certification system ಗಳಂತಹ ಕ್ರಮಗಳನ್ನು ಅನುಸರಿಸುವುದರ ಮೂಲಕ ಮಾವಿನ ರಫ್ತಿನ ನಿಷೇಧವನ್ನು ತೆರೆವುಗೊಳಿಸಲು ಕ್ರಮವಹಿಸಲಾಗಿರುತ್ತದೆ.

ಆ) ಸದರಿ ರಫ್ತು ನಿಷೇಧದಿಂದ ಆಂತರಿಕ ಮಾರುಕಟ್ಟೆಯಲ್ಲಿ ಮಾವಿನ ಹಣ್ಣಿನ ಬೆಲೆಯಲ್ಲಿ ಗಮನಾರ್ಹ ಸ್ಥಿತ್ಯಾಂತರಗಳು ಆಗಿರುವುದಿಲ್ಲ. ಏಕೆಂದರೆ ರಾಜ್ಯದ/ದೇಶದಿಂದ ಐರೋಪ್ಯ ರಾಷ್ಟ್ರಗಳಿಗೆ ಒಟ್ಟಾರೆ ರಫ್ತು ಪ್ರಮಾಣವು ಅತ್ಯಲ್ಪವಾಗಿದ್ದು, ಇದರಿಂದಾಗಿ, ಮಾರುಕಟ್ಟೆಯಲ್ಲಿ ಬೆಲೆ ಕುಸಿತ ಆಗಿರುವುದಿಲ್ಲ

ಪ್ರಸಕ್ತ ವರ್ಷ, ಇಳಿ ಹಂಗಾಮು ಆಗಿದ್ದ ಪ್ರಯುಕ್ತ ಮತ್ತು ಫೆಬ್ರವರಿ–ಮಾರ್ಚ್ 2014 ರಲ್ಲಿ ಸುರಿದ ಅಕಾಲಿಕ ಆಲಿಕಲ್ಲು ಮಳೆಯಿಂದಾಗಿ ಬೇಡಿಕೆಗೆ ಅನುಗುಣವಾಗಿ ಹಣ್ಣುಗಳ ಉತ್ಪಾದನೆ ಕುಂಠಿತವಾಗುತ್ತದೆ. ಈ ಕಾರಣಗಳಿಂದಾಗಿ, ಮಾರುಕಟ್ಟೆಯಲ್ಲಿ ಬೆಲೆಗಳು ಸಾಕಷ್ಟು ಮೇಲ್ಮಟ್ಟದಲ್ಲಿ ಇದ್ದುದರಿಂದ, ರೈತರಿಗೆ ಉತ್ತಮ ಬೆಲೆ ದೊರಕಿರುತ್ತದೆ.

ಇಲಾಖೆಯಿಂದ ಮಾವು ಬೆಳೆಯುವ ಪ್ರಮುಖ ಜಿಲ್ಲೆಗಳಾದ ರಾಮನಗರ, ದಾವಣಗೆರೆ, ಮೈಸೂರು ಹಾಗೂ ಬೆಂಗಳೂರಿನಲ್ಲಿ ಮಾವು ಮೇಳವನ್ನು ಆಯೋಜಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ;

ಭೌತಿಕ: ಟನ್‌ಗಳಲ್ಲಿ

ಆರ್ಥಿಕ: ` ಲಕ್ಷಗಳಲ್ಲಿ

ಕ್ರ. ಸಂ.	ಜಿಲ್ಲೆ	ಮೇಳ ನಡೆಸಲಾದ ದಿನಾಂಕ	ಮಾರಾಟದ ಹಣ್ಣು	
			ಭೌತಿಕ	ಆರ್ಥಿಕ
1	ಮೈಸೂರು	26–5–14 ರಿಂದ 28–05–14 ರ ವರೆಗೆ	160	78.00
2	ರಾಮನಗರ	09–05–14 ರಿಂದ 18–05–14 ರವರೆಗೆ	50	35.00

3	ದಾವಣಗೆರೆ	19–5–14 ರಿಂದ 22–5–14 ರವರೆಗೆ	8.03	4.82
4	ಲಾಲ್‌ಬಾಗ್, ಬೆಂಗಳೂರು	23–05–14 ರಿಂದ 22–06–14 ರ ವರೆಗೆ	715.77	363.30

ಇದಲ್ಲದೇ, ಮುಂದಿನ ದಿನಗಳಲ್ಲಿ ಮಾವಿನ ಮಾರಟ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅದರಲ್ಲೂ ರಫ್ತು ಗುಣಮಟ್ಟದ ಹಣ್ಣಿನ ಮಾರುಕಟ್ಟೆಗೆ ಸಂಬಂಧಿಸಿದಂತೆ, ಆಂತರಿಕ ಮಾರುಕಟ್ಟೆಯನ್ನು ಪ್ರಬಲಗೊಳಿಸಲು ಸರ್ಕಾರವು ಯೋಜಿಸಲಾಗಿರುತ್ತದೆ.

ಈ ದಿಶೆಯಲ್ಲಿ ಸರ್ಕಾರದ ವತಿಯಿಂದ ಕೋಯ್ಲೋತ್ತರ ನಿರ್ವಹಣೆಗೆ ಸಂಬಂಧಿಸಿದಂತೆ ಮಾವು ಅಭಿವೃದ್ಧಿ ಕೇಂದ್ರವನ್ನು ಚಿಂತಾಮಣಿಯಲ್ಲಿ ಹಾಗೂ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತವನ್ನು ಸ್ಥಾಪಿಸಲಾಗಿದ್ದು, ಇವುಗಳ ನಿಗಮ ನಿಯಮಿತವನ್ನು ಸ್ಥಾಪಿಸಲಾಗಿದ್ದು, ಇವುಗಳ ಮೂಲಕ ಆಂತರಿಕ ಹಾಗೂ ವಿದೇಶಿ ಮಾರುಕಟ್ಟೆಗೆ ಗುಣಮಟ್ಟದ ಹಣ್ಣುಗಳ ಪೂರೈಕೆ ಬಗ್ಗೆ ರೈತರಿಗೆ ಹಾಗೂ ವರ್ತಕರಿಗೆ ತರಬೇತಿ ನೀಡಲು ಯೋಜಿಸಲಾಗಿರುತ್ತದೆ.

ಇ) ನಮ್ಮ ರಾಜ್ಯದಿಂದ ಮಾವಿನ ಹಣ್ಣು, ದ್ರಾಕ್ಷಿ, ಪೈನಾಪಲ್, ಸಪೋಟ, ಬಾಳೆಹಣ್ಣು, ಪಪಾಯ ಮತ್ತು ದಾಳಿಂಬೆ ಮುಂತಾದ ಹಣ್ಣುಗಳನ್ನು ರಫ್ತು ಮಾಡಲಾಗಿದೆ.

2013–14 ನೇ ಸಾಲಿನಲ್ಲಿ ರಾಜ್ಯದಿಂದ 238 ಟನ್‌ಗಳು ಪ್ರಮಾಣದ ಹಾಗೂ ` 488 ಕೋಟಿಗಳ ಮೌಲ್ಯದ ಹಣ್ಣುಗಳನ್ನು ರಫ್ತು ಮಾಡಲಾಗಿದೆ.

ಈ) ಹೌದು.

ಉ) ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಫೆಬ್ರವರಿ–ಮಾರ್ಚ್ 2014 ರಲ್ಲಿ ಸುರಿದ ಅಕಾಲಿಕ ಆಲಿಕಲ್ಲು ಮಳೆಯಿಂದ ಆಗಿರುವ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸರ್ಕಾರದ ಆದೇಶದ ಸಂಖ್ಯೆ: ಆರ್ ಡಿ 109 ಟಿ ಎನ್ ಆರ್ 2014 ಬೆಂಗಳೂರು, ದಿ:26–05–2014 ಹಾಗೂ ದಿ:12–6–2014 ರಂತೆ ಇನ್‌ಪುಟ್ ಸಬ್ಸಿಡಿಯಾಗಿ NDRF/SDRF ಮಾರ್ಗಸೂಚಿಯಂತೆ ಕಂದಾಯ ಇಲಾಖೆಯ ` 326.50 ಕೋಟಿಗಳ ಪರಿಹಾರ ಧನವನ್ನು ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಮಾರ್ಗಸೂಚಿಯಂತೆ ಮಳೆಯಾಶ್ರಿತ ಬೆಳೆ ಗಳಿಗೆ ಪ್ರತಿ ಹೆಕ್ಟೇರ್‌ಗೆ `15,000–00, ನೀರಾವರಿ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ` 25,000–00 ಹಾಗೂ ಬಹುವಾರ್ಷಿಕ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ` 40,000–00 ರಂತೆ ಪ್ರತಿ ರೈತನಿಗೆ 2 ಹೆಕ್ಟೇರ್ ವರೆಗೂ ಮಿತಿಗೊಳಿಸಲಾಗಿರುತ್ತದೆ. ರೈತರಿಗೆ ಪರಿಹಾರ ಧನ ವಿತರಣೆ ಕಾರ್ಯವು ಕಂದಾಯ ಇಲಾಖೆಯಿಂದ ಕೈಗೊಳ್ಳಲಾಗುತ್ತಿದ್ದು ಪ್ರಗತಿಯಲ್ಲಿರುತ್ತದೆ.

ಶ್ರೀ ಸಿದ್ದು ಬಿ. ನ್ಯಾಮಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ಮಾವಿನ ಹಣ್ಣು ಮತ್ತು ಇತರೆ ಹಣ್ಣುಗಳನ್ನು ಯೂರೋಪ್ ದೇಶಕ್ಕೆ ಆಮದು ಮಾಡಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಅದು ಬ್ಯಾಕ್ಟೀರಿಯಾಗಳಿಂದ effect ಆಗಿದೆ ಎಂದು ನಿಷೇಧ ಮಾಡಿದ್ದಾರೆ. ಅದಕೋಸ್ಕರ ಈ ವರ್ಷ ಮಾವಿನ ಹಣ್ಣು export ಆಗುವುದು ನಿಂತಿದೆ. ಅದೇ ಮಾದರಿಯಾಗಿ ನಮ್ಮ ರಾಜ್ಯದಲ್ಲಿಯೂ ಕೂಡ ಅನೇಕ ಹಣ್ಣುಗಳು ಮಾರ್ಕೆಟ್‌ಗೆ ಬರುತ್ತದೆ. ಅದರ ಬಗ್ಗೆಯೂ ಕೂಡ ತಮ್ಮ ಇಲಾಖೆಯ ಕಡೆಯಿಂದ ಏನಾದರೂ ಪರಿಕ್ಷೆ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ ಹೇಗೆ? ಮನುಷ್ಯನ ಆರೋಗ್ಯಕ್ಕೆ ಹಾನಿಕಾರಿಯಾಗುವಂತಹ ಹಣ್ಣುಗಳು ಮಾರ್ಕೆಟ್‌ಗೆ ಬಂದರೆ ತಾವೂ ಕೂಡ ಸರ್ಕಾರದ ವತಿಯಿಂದ ಅದನ್ನು ಚೆಕ್ ಮಾಡಿ ಯಾವ ಹಣ್ಣು ಉಪಯೋಗವಾಗುವುದಿಲ್ಲ ಅಂತಹ ಹಣ್ಣುಗಳನ್ನು

ನಿಷೇಧ ಮಾಡುವ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ ಹೇಗೆ? ಎರಡನೆಯದಾಗಿ ಮೊನ್ನೆ ದಿನ ಆಲಿಕಲ್ಲು ಮಳೆಯಿಂದ ದ್ರಾಕ್ಷಿ, ದಾಳಿಂಬೆ ಹಾನಿಯಾಯಿತು. ತಾವೂ ಕೂಡ ಆ ಸಂದರ್ಭದಲ್ಲಿ ನಮ್ಮ ಜಿಲ್ಲೆಗೆ ಬಂದಿದ್ದಿರಿ, ವೀಕ್ಷಣೆ ಮಾಡಿದ್ದೀರಿ. ಆದರೆ ಪರಿಹಾರ ಬೆಲೆಯು ಇನ್ನೂ ರೈತರಿಗೆ ಮುಟ್ಟಿಲ್ಲ. ಅದಕೋಸ್ಕರ ಆ ಪರಿಹಾರದ ಹಣವನ್ನು ಯಾವಾಗ ಕೊಡುತ್ತೀರಿ? ಆ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರೆಂದು ಹೇಳಬೇಕು.

ಡಾ॥ ಶಾಮನೂರು ಶಿವಶಂಕರಪ್ಪ:– ಮಾನ್ಯ ಅಧ್ಯಕ್ಷರೆ, ರಫ್ತಿನ ಮೇಲೆ European ರಾಷ್ಟ್ರೀಯ ಒಕ್ಕೂಟ ನಿಷೇಧ ಹೇರಿರುವುದು ನಿಜ. ಅವರು ಮಾವಿನ ಹಣ್ಣು ಒಂದೇ ಅಲ್ಲ, ಬದನೆಕಾಯಿ, ಹಾಗಲಕಾಯಿ, ಕೆಸುವಿನ ಗೆಡ್ಡೆ, ಪಡುವಲಕಾಯಿ ಇವುಗಳ ಮೇಲೆ ನಿಷೇಧವನ್ನು ಹೇರಿದ್ದಾರೆ. ಆದರೆ ಈಗ European Union ನ ಆಹಾರ ಮತ್ತು ಪಶುವೈದ್ಯಕೀಯ ಸಂಸ್ಥೆಯ ವತಿಯಿಂದ ಸೆಪ್ಟೆಂಬರ್ 2 ರಿಂದ 12ನೇ ತಾರೀಖಿನವರೆಗೂ ಭಾರತಕ್ಕೆ ಭೇಟಿ ನೀಡಿ Export Inspection ಮತ್ತು Certification System ಅನ್ನು ಪರಿಶೀಲಿಸಿ ನಿಷೇಧವನ್ನು ಪುನರ್ ಪರಿಶೀಲಿಸುವುದಾಗಿ ಅವರು ತಿಳಿಸಿದ್ದಾರೆ. ತಾವು ಹೇಳಿದಂತೆ ನಾವು ಮತ್ತು ನೀವು ಜೊತೆಗೂಡಿ ಆಲಿಕಲ್ಲು ಮಳೆಯಿಂದ ಹಾನಿಯಾಗಿರುವಂತಹ ಸಂದರ್ಭದಲ್ಲಿ ಅದಕ್ಕೆ ಈಗಾಗಲೇ ಒಟ್ಟು 326 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ರೈತರಿಗೆ ಹಣವನ್ನು ಕೊಟ್ಟಿದ್ದೇವೆ. ಇದರಲ್ಲಿ ರಾಜ್ಯದ ಪಾಲು 43 ಕೋಟಿ ರೂಪಾಯಿಗಳು, ಕೇಂದ್ರದ ಪಾಲು 82 ಕೋಟಿ ರೂಪಾಯಿಗಳು ಇದೆ. ಈ ರೀತಿಯಾಗಿ ಮಳೆ ಆಶ್ರಿತ ಪ್ರದೇಶಗಳಿಗೆ 15,000, ನೀರಾವರಿ ಪ್ರದೇಶಗಳಿಗೆ 25,000 ರೂಪಾಯಿಗಳು, ಬಹುವಾರ್ಷಿಕ ಬೆಳೆಗಳಿಗೆ 40,000 ರೂಪಾಯಿಗಳನ್ನು ಈ ರೀತಿ ಪ್ರತಿ ಹೆಕ್ಟೇರ್‌ಗೆ ಎರಡು ಹೆಕ್ಟೇರ್ ಲಿಮಿಟ್ ಮಾಡಿ ಎಲ್ಲರಿಗೂ ಕೂಡ ನಾವು ಹಣವನ್ನು ಸಂದಾಯ ಮಾಡಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ನಿಷೇಧವನ್ನು ಐರೋಪ್ಯ ರಾಷ್ಟ್ರಗಳು ಹೇರಿರುವುದರಿಂದ ನಮಗೆ ಅಷ್ಟೊಂದು ಲಾಸ್ ಆಗುವುದಿಲ್ಲ. ಏಕೆಂದರೆ ಒಟ್ಟು export ಮಾಡಿರುವಂತದ್ದು 6600 ಕೋಟಿ. ಅದರಲ್ಲಿ ಸುಮಾರು 3300

ಕೋಟಿ ರೂಪಾಯಿಗಳು ಕಾಫಿಯದ್ದು ಇದೆ. ಇನ್ನು 3300 ಕೋಟಿ ರೂಪಾಯಿಗಳು ಹಣ್ಣಿನದ್ದು ಇದೆ. ಇವೆಲ್ಲವನ್ನು ನೋಡಿದರೆ financially 1%ಗಿಂತಲೂ ಕಡಿಮೆ ಇದೆ. ಆದ್ದರಿಂದ ಅಂತಹ ಲಾಸ್ ನಮಗೇನೂ ಆಗುವುದಿಲ್ಲ. ಈಗ ನಾವು ಎಲ್ಲರಿಗೂ ಶ್ರೀನಿವಾಸಪುರ ಕೋಲಾರ ಮುಂತಾದ ಜಾಗಗಳಲ್ಲಿ training ಕೊಡುತ್ತಿದ್ದೇವೆ. Packing system ಹೇಗೆ ಮಾಡಬೇಕು, export ಕಳುಹಿಸಬೇಕಾದರೆ ಏನೇನು ಕ್ರಮ ಅನುಸರಿಸಬೇಕೆಂದು training ಕೊಡುತ್ತಿರುವುದರಿಂದ ಮುಂದೆ export ಜಾಸ್ತಿ ಯಾಗುತ್ತದೆ ಎಂದು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತಿದ್ದೇನೆ.

ಶ್ರೀ ಸಿದ್ದು ಬಿ. ನ್ಯಾಮಗೌಡ:– ನಮ್ಮಲ್ಲಿಯೂ ಕೂಡ ಹಣ್ಣು ಪರೀಕ್ಷೆ ಮಾಡುವಂತಹ ವ್ಯವಸ್ಥೆಯನ್ನು ತಮ್ಮ ಇಲಾಖೆಯಿಂದ ಮಾಡುತ್ತೀರಾ ಹೇಗೆ ಎಂದು ನಾನು ಕೇಳುತ್ತಿದ್ದೇನೆ. ತಾವು ಹಣ ಬಿಡುಗಡೆ ಮಾಡಿರುವುದು ಇನ್ನೂ D.C. ಯವರ accountನಲ್ಲಿ ಜಮಾ ಆಗಿದೆ. ಆ ಹಣವು ಇನ್ನೂ ರೈತರಿಗೆ ತಲುಪಿರುವುದಿಲ್ಲ. ರೈತರು ಬಹಳ ಕಷ್ಟದಲ್ಲಿದ್ದಾರೆ. ಅದಕ್ಕಾಗಿ ಆದಷ್ಟು ಬೇಗ ರೈತರಿಗೆ ಆ ಹಣ ತಲುಪುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಡಬೇಕು.

ಅಧ್ಯಕ್ಷರು:– ತಾವು ಕಳುಹಿಸಿರುವ ಹಣ ಡಿ.ಸಿ.ಯವರ ಅಕೌಂಟಿಗೆ ಹೋಗಿದೆ. ರೈತರಿಗೆ ಮುಟ್ಟಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಯಶವಂತರಾಯಗೌಡ:– ನಿಜವಾಗಿಯೂ ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ಈ ರೀತಿ ಅವ್ಯವಾಹಿತವಾಗಿ ರೈತರಿಗೆ ಬಹಳಷ್ಟು ತೊಂದರೆ ಆಗಿತ್ತು. ಹಣ ಬಿಡುಗಡೆಯಾಗಿ 15 ದಿವಸವಾದರೂ ಸಹ ಅದು ರೈತನಿಗೆ ಮುಟ್ಟಿಲ್ಲ.

ಅಧ್ಯಕ್ಷರು:– ಆಯಿತು. ಬೇಗ ಹಣವನ್ನು ಬಿಡುಗಡೆ ಮಾಡುವ ಬಗ್ಗೆ D.C. ಯವರಿಗೆ instruction ಕೊಡಿ.

ಡಾ॥ ಶಾಮನೂರು ಶಿವಶಂಕರಪ್ಪ:– ರೈತರಿಗೆ ಪೇಮೆಂಟ್ ಮಾಡುವುದಕ್ಕೆ instruction ಕೊಡುತ್ತೇನೆ.

ಶ್ರೀ ಸಿದ್ದು ಬಿ. ನ್ಯಾಮಗೌಡ:– D.C. ಬಂದಿಲ್ಲ ಸರ್.

ಅಧ್ಯಕ್ಷರು:– ಡಿ.ಸಿ. ಯವರಿಗೆ deposit ಇಟ್ಟುಕೊಳ್ಳುವಂತಹ ಕೆಟ್ಟ ಚಟ ಇದೆ.

ಮಾನ್ಯ ಸದಸ್ಯರು:– ಸರ್ಕಾರ ಹಣ ಸಕಾಲದಲ್ಲಿ ಬಿಡುಗಡೆ ಮಾಡಿದರೂ ಸಹ ಜಿಲ್ಲಾಧಿಕಾರಿಗಳು ಸರಿಯಾಗಿ ಬಿಡುಗಡೆ ಮಾಡುವುದಿಲ್ಲ.

ಅಧ್ಯಕ್ಷರು:– ಶ್ರೀ ವಸಂತ ಬಂಗೇರಾರವರೆ, ತಾವು ಪ್ರಶ್ನೆ ಸಂಖ್ಯೆ 691 ಅನ್ನು ಕೇಳಿ.

ಸರ್ ವಿದ್ಯುತ್ ಚಾಲಿತ ನೀರಾವರಿ ಪಂಪ್ ಸೆಟ್‌ಗಳು

72(691); ಶ್ರೀ ವಸಂತ ಬಂಗೇರ ಕೆ (ಬೆಳ್ತಂಗಡಿ)

ಅ) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವತಿಯಿಂದ ಕಳೆದ 2 ವರ್ಷಗಳಲ್ಲಿ ಸೌರ ವಿದ್ಯುತ್ ಚಾಲಿತ ನೀರಾವರಿ ಪಂಪ್ ಸೆಟ್‌ಗಳು, ಸೌರ ವಿದ್ಯುತ್ ಮೇಲ್ಛಾವಣಿ ಹಾಗೂ ಎಲ್‌ಇಡಿ ಸೌರ ಶಕ್ತಿ ಕಂದೀಲುಗಳನ್ನು ಒದಗಿಸುವ ಬಗ್ಗೆ ಕೇಂದ್ರ ಸರಕಾರದಿಂದ ಬಿಡುಗಡೆಯಾದ ಮೊತ್ತ ಎಷ್ಟು

ಆ) ರಾಜ್ಯ ಸರಕಾರದಿಂದ ಬಿಡುಗಡೆಯಾದ ಮೊತ್ತ ಎಷ್ಟು;

ಇ) ಎಷ್ಟು ಮಂದಿ ಫಲಾನುಭವಿಗಳಿಗೆ ಈ ಸೌಲಭ್ಯವನ್ನು ಒದಗಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಕಳೆದ 2 ವರ್ಷಗಳಲ್ಲಿ ಸೌರ ವಿದ್ಯುತ್ ಚಾಲಿತ ನೀರಾವರಿ ಪಂಪ್‌ಸೆಟ್‌ಗಳು, ಸೌರ ವಿದ್ಯುತ್ ಮೇಲ್ಛಾವಣಿ ಹಾಗೂ ಎಲ್‌ಇಡಿ